ಪಿಹೆಚ್ಎಸ್ ಬಸ್ಸುಗಳನ್ನು ಆಚರಣೆ ಮಾಡುವಂತೆ ಬೇಡಿಕೆ ಇರುವುದಿಲ್ಲ. ಸಧ್ಯ 13 ಪಿಹೆಚ್ಎಸ್ ಬಸ್ಸುಗಳು ಜಯನಗರ 4ನೇ ಬ್ಲಾಕ್ ಬಸ್ ನಿಲ್ದಾಣ ಮಾರ್ಗವಾಗಿ ವಿಧಾನ ಸೌಧಕ್ಕೆ ಆಚರಣೆಯಾಗುತ್ತಿವೆ.

ಬೆಂಗಳೂರು ನಗರದಲ್ಲಿ ಮಾರುತಿ ಟ್ಯಾಕ್ಸಿಗಳ ಸಂಚಾರ

1701 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಮಾರುತಿ ಟ್ಯಾಕ್ಸಿಗಳ ಸಂಚಾರ ಪ್ರಾರಂಭವಾಗಿದೆಯೇ?*

ಆ) *ಇದುವರೆಗೆ ಎಷ್ಟು ಮಾರುತಿ ಟ್ಯಾಕ್ಸಿಗಳಿಗೆ ಪರವಾನಗಿ ನೀಡಲಾಗಿದೆ?*

ಇ) *ಇದಕ್ಕೆ ಸಂಬಂಧಪಟ್ಟ ಹಾಗೆ ದರವನ್ನು ನಿಗಧಿ ಮಾಡಲಾಗಿದೆಯೇ?*

ಈ) *ಈ ಟ್ಯಾಕ್ಸಿಗಳಿಗಾಗಿ ಪ್ರತ್ಯೇಕ ನಿಲ್ದಾಣಗಳನ್ನು ನಿರ್ಮಿಸಲಾಗಿದೆಯೇ?*

ಉ) *ಈ ಟ್ಯಾಕ್ಸಿಗಳ ಪರವಾನಗಿಯನ್ನು ಹೆಚ್ಚು ಮಾಡಲು ನಿರ್ಧರಿಸಲಾಗಿದೆಯೇ?*

ಊ) *ಈ ಟ್ಯಾಕ್ಸಿಗಳ ಓಡಾಟದಿಂದ ಸರ್ಕಾರಕ್ಕೆ ಬರುವ ಹೆಚ್ಚಿನ ವರಮಾನವೆಷ್ಟು?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಕೆ.ಜಿ.ಎಫ್. ನಲ್ಲಿ ಕೇಂದ್ರಿಯ ನಿಯೋಜಿತ ಯೋಜನೆ

1705 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಜಿ.ಎಫ್.ನಲ್ಲಿ ಬಹುತೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಂದ ಕೂಡಿದ್ದು ಹಾಗೂ ಬಹಳಷ್ಟು ಮಂದಿ ಕುಶಲ ಹಾಗೂ ಅರೆಕುಶಲ ಮತ್ತು ಅನೇಕ ಮಂದಿ ಗಾರೆ ಕೆಲಸಗಾರರನ್ನು ಹೊಂದಿದ್ದು, ತೀವ್ರ, ನಿರುದ್ಯೋಗವನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಕೇಂದ್ರಿಯ ನಿಯೋಜಿತ ಯೋಜನೆಯಡಿಯಲ್ಲಿ ಹಾಗೂ ಕರ್ನಾಟಕ ರಾಜ್ಯ ನಿರ್ಮಾಣ ಕೇಂದ್ರ (ಕಾರ್ನಿಕ್) ಸಂಸ್ಥೆಯ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಒಂದು ನಿರ್ಮಿತಿ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ?*